# ಪ್ರೇಮದ ಮಾರ್ಗ

## ದಾದು ದಯಾಳ್ (1544-1603)

ಗುಜರಾತ್‌ನ ಅಹಮದಾಬಾದ್ ನಗರದಲ್ಲಿ ಹುಟ್ಟಿದ ಹಾಗೂ ರಾಜಾಸ್ಥಾನದಲ್ಲಿ ಕೊನೆಯವರೆಗೂ ಜೀವಿಸಿದ್ದ ದಾದು, ವೃತ್ತಿಯಲ್ಲಿ (ಹತ್ತಿಯನ್ನು ಎಕ್ಕುವ) ಪಿಂಜಾರ ಸಮುದಾಯಕ್ಕೆ ಸೇರಿದವನಾಗಿದ್ದನು. ಅಧಿಕೃತವಾಗಿ ಇವನ ವೈಯಕ್ತಿಕ ಜೀವನದ ಬಗ್ಗೆ ಹೆಚ್ಚೇನೂ ತಿಳಿಯದಿದ್ದರೂ ಇವನ ಶಿಷ್ಯರು-ಅಭಿಮಾನಿಗಳು ಕಟ್ಟಿಕೊಟ್ಟ ಅನೇಕ ಐತಿಹ್ಯಗಳಿವೆ. ಒಂದು ಜನಪ್ರಿಯ ಐತಿಹ್ಯದ ಪ್ರಕಾರ (ಕಬೀರನ ಬಗ್ಗೆ ಇರುವ ಐತಿಹ್ಯದಂತೆ) ಸಾಬರಮತಿ ನದಿಯಲ್ಲಿ ತೇಲುತ್ತಿದ್ದ ಚಿಕ್ಕ ಮಗುವೊಂದನ್ನು ಲೋಧಿರಾಮ್ ಎಂಬ ಅಹಮದಾಬಾದಿನ ನಾಗ ಬ್ರಾಹ್ಮಣನು ಕಂಡು, ಅದನ್ನೆತ್ತಿಕೊಂಡು ಮನೆಗೆ ಹೋದನು. ಅನಂತರ ಅದನ್ನು ಅವನು ಮತ್ತು ಅವನ ಪತ್ನಿ ವಸಿಬಾಯಿ ತಮ್ಮ ಮಗುವೆಂದೇ ಬೆಳೆಸಿದರು. ಆ ಮಗುವೇ ಮುಂದೆ ದಾದು ದಯಾಳ್ ಎಂಬ ಪ್ರಸಿದ್ಧ ಸಂತ-ಅನುಭಾವಿ ಕವಿಯಾದನು.

ದಾದು ಎಂದರೆ ಸಹೋದರ. ದಯಾಳ್ ಎಂದರೆ ದಯೆಯುಳ್ಳವನು, ದಯಾಳು. ಎಂಟು ವರ್ಷಗಳ ದಾದು ಕಬೀರನನ್ನು ಭೇಟಿಯಾದನೆಂದು ಮತ್ತು ಅವನಿಂದ ತುಂಬಾ ಪ್ರಭಾವಿತನಾದನೆಂದು ಹೇಳಲಾಗುತ್ತದೆ; ತನ್ನ ಮೇಲಾದ ಕಬೀರನ ಪ್ರಭಾವವನ್ನು ದಾದು ತನ್ನ ಒಂದು ದೋಹಾದಲ್ಲಿ ತುಂಬಾ ಭಕ್ತಿಯಿಂದ ದಾಖಲಿಸುತ್ತಾನೆ. ಮತ್ತೊಂದು ಐತಿಹ್ಯದ ಪ್ರಕಾರ, ಕಬೀರನ ಮಕ್ಕಳಲ್ಲಿ ಒಬ್ಬನು ದಾದುವಿಗೆ ಭಕ್ತಿಪಂಥಕ್ಕೆ ದೀಕ್ಷೆಯನ್ನು ಕೊಡುತ್ತಾನೆ. ತನ್ನ 18ನೆಯ ವಯಸ್ಸಿನಲ್ಲಿ ದಾದು ರಾಜಸ್ಥಾನದ ಜೈಪುರಕ್ಕೆ ಹೋಗಿ, ಅನಂತರ ಆರೇಳು ವರ್ಷಗಳ ತನಕ ಎಲ್ಲಾ ಕಡೆ ಪ್ರವಾಸವನ್ನು ಕೈಗೊಳ್ಳುತ್ತಾನೆ. ಕೊನೆಗೆ, ಜೈಪುರದ ಹತ್ತಿರವಿರುವ ನರೈನ ಎಂಬ ಸ್ಥಳದಲ್ಲಿ ನೆಲೆನಿಂತು, ಅಲ್ಲಿಯೇ ವಿಧಿವಶನಾಗುತ್ತಾನೆ.

ನರೈನದಲ್ಲಿದ್ದಾಗಲೇ ದಾದು ಜಾತಿ-ಧರ್ಮ-ಲಿಂಗ ಭೇದಗಳನ್ನು ಮೀರಿದ 'ದಾದು ಪಂಥ'ವನ್ನು ಸ್ಥಾಪಿಸಿದನು. ಅವನ ಕೊನೆಗಾಲದಲ್ಲಿ ಅವನಿಗೆ 100 ಶಿಷ್ಯರಿದ್ದರು. ಅವರೊಡನೆ ಇನ್ನೂ 52 ಅನುಯಾಯಿಗಳನ್ನು ಒಟ್ಟು ಸೇರಿಸಿ, ಅವರೆಲ್ಲರೂ ಭಿನ್ನ ಸ್ಥಳಗಳಿಗೆ ಹೋಗಿ 'ಥಂಬ'ಗಳನ್ನು (ಆಶ್ರಮಗಳನ್ನು) ಸ್ಥಾಪಿಸಿ, ತನ್ನ ತತ್ವಗಳನ್ನು ಹರಡಬೇಕೆಂದು ಆದೇಶಿಸುತ್ತಾನೆ. ಆ ರೀತಿ ಸ್ಥಾಪಮೆಗೊಂಡ ಥಂಬಗಳಲ್ಲಿ ಐದು ತುಂಬಾ ಪ್ರಮುಖವೆಂದು ದಾದು ಪಂಥೀಯರು ನಂಬುತ್ತಾರೆ: ಅವೆಂದರೆ, ನರೈನ, ಭೈರಾಂಜಿ, ಸಂಭರ್, ಆಮೇರ್ ಮತ್ತು ಕರಡಾಲ – ಈ ಸ್ಥಳಗಳಲ್ಲಿ ಸ್ಥಾಪಿಸಲ್ಪಟ್ಟಿರುವ ಥಂಬಗಳು. ದಾದು ಪಂಥವು ಜಾತಿ-ಮತ ಭೇದಗಳನ್ನು ಮೀರಿದ ಒಂದು ಬಗೆಯ ವಿರಕ್ತ ಪಂಥ: ಈ ಪಂಥೀಯರಿಗೆ ಮಾಂಸಾಹಾರ, ಮದ್ಯಪಾನ, ಜೂಜಾಟ, ಇತ್ಯಾದಿಗಳು ನಿಷೇಧ. ಇಂದಿಗೂ ದಾದು ಪಂಥವು ರಾಜಾಸ್ಥಾನದಲ್ಲಿ ಪ್ರಭಾವಿಯಾಗಿದೆ.

ದಾದು ಎಂದೂ ತನ್ನ ಕವನಗಳನ್ನಾಗಲಿ, ಪ್ರವಚನಗಳನ್ನಾಗಲಿ ಸ್ವತಃ ಬರೆದಿಡಲಿಲ್ಲ; ಆದರೆ ಬ್ರಜ ಭಾಷೆಯಲ್ಲಿದ್ದ ಆ ಕವನಗಳನ್ನು ದಾದುವಿನ ಶಿಷ್ಯರು ಬರೆದಿಟ್ಟುಕೊಳ್ಳುತ್ತಿದ್ದರು. ರಜ್ಜಬ್ ಎಂಬ ಪಟ್ಟಶಿಷ್ಯ ದಾದುವಿನ ಸಾವಿನ ನಂತರ ಕಾಲಕಾಲಕ್ಕೆ ದಾದು ರಚಿಸುತ್ತಿದ್ದ ಪ್ರಾರ್ಥನೆಗಳಲ್ಲಿ ಮತ್ತು ಉಪದೇಶಗಳಲ್ಲಿ 5000 ರಚನೆಗಳನ್ನು ಸಂಪಾದಿಸಿದನು; ಆ ಸಂಕಲನದ ಹೆಸರು 'ದಾದು ಅನುಭವ್ ಬಾಣಿ'. ಬಾಣಿ ದಾದು ಪಂಥೀಯರಿಗೆ ಇಂದಿಗೂ ಪವಿತ್ರ ಸಂಕಲನವಾಗಿದೆ. ಜನಗೋಪಾಲ್ ಎಂಬ ದಾದುವಿನ ಮತ್ತೊಬ್ಬ ಪ್ರಮುಖ ಶಿಷ್ಯನು ದಾದುವಿನ ಜೀವನಚರಿತ್ರೆಯನ್ನು ಬರೆದನು. (ದಾದುವಿನ ಕಾಲದಲ್ಲಿ ಮೊಘಲ್ ಸಾಮ್ರಾಟನಾಗಿದ್ದ ಅಕ್ಬರ್ ಕೂಡಾ ದಾದುವನ್ನು ತುಂಬಾ ಗೌರವದಿಂದ ಕಾಣುತ್ತಿದ್ದನೆಂದು, ತನ್ನನ್ನು ದಾದುವಿನ ಶಿಷ್ಯನೆಂದು ಪರಿಗಣಿಸುತ್ತಿದ್ದನೆಂದು ಹೇಳಲಾಗುತ್ತದೆ.)

ದಾದುವಿನ ಜೀವನದರ್ಶನಕ್ಕೂ ಕಬೀರನ ಜೀವನದರ್ಶನಕ್ಕೂ ಹೆಚ್ಚೇನೂ ವ್ಯತ್ಯಾಸವಿಲ್ಲ. ದಾದು/ಕಬೀರ್ ಬೋಧಿಸಿದ ಮುಖ್ಯ ತತ್ವಗಳೆಂದರೆ: ಸರ್ವ ಸಮಾನತೆ, ಜಾತಿ-ಧರ್ಮಗಳ ಭಿನ್ನತೆಯ ತಿರಸ್ಕಾರ, ಏಕದೇವೋಪಾಸನೆ, ಸರಳ ಬದುಕು, ರಾಮನಾಮದ ಮಹತ್ವ, ಪ್ರಾಪಂಚಿಕ ಮೋಹದ ತ್ಯಾಗ, ಜೀವಾತ್ಮ-ಪರಮಾತ್ಮ ಅಭಿನ್ನತೆ ಮತ್ತು ಆಂತರಿಕ ಸತ್ಯದ ಸಾಕ್ಷಾತ್ಕಾರ.

Medieval Indian Literature: An Anthology, vol. 2, ಈ ಸಂಕಲನದಲ್ಲಿರುವ ಲೇಖನದಲ್ಲಿ, ಜೆ. ಪಿ. ಶ್ರೀವಾಸ್ತವ, ದಾದುವಿನ ತತ್ವಗಳ ಬಗ್ಗೆ ಒಟ್ಟಾರೆಯಾಗಿ ಹೀಗೆ ಹೇಳುತ್ತಾರೆ: '(ತನ್ನ ಜೀವನದರ್ಶನದಲ್ಲಿ ದಾದು) ವೈಷ್ಣವ ಪಂಥದ ಅಹಿಂಸಾ ತತ್ವ, ಯೋಗಿಗಳ ಆತ್ಮನಿಯಂತ್ರಣ, ಮತ್ತು ಸೂಫಿಗಳ ಪ್ರೇಮ ತತ್ವ, ಇವು ಮೂರನ್ನೂ